


◆ **ನಿಮ್ಮದೊಂದು ಕವಿತೆಯಿದೆ, 'ಥೂಕ್' ಅಂತ. ಹಿಂದಿಯಲ್ಲಿ ಥೂಕ್ ಎಂಬುದು ನಾಮಪದ ಮತ್ತು ಕ್ರಿಯಾಪದ ಎರಡೂ ಕೂಡ ಹೌದು. ಅಂದರೆ ಉಗುಳು ಮತ್ತು ಉಗಿ ಎಂಬ ಎರಡೂ ಅರ್ಥಗಳಿವೆ. ನನ್ನನ್ನು ಕಾಡಿದ ಕವಿತೆಯಿದು. ನಮ್ಮ ದೇಶದ ಜನರ ಕಂಠದಲ್ಲಿ ಉಗುಳು ಕಡಿಮೆಯಾಗಿದೆ ಅಂತ ಕವಿತೆ ಮುಕ್ತಾಯವಾಗಿದೆ. ಈ ಕವಿತೆಯ ಕಲ್ಪನೆ ಬಂದದ್ದು ಹೇಗೆ?**

ಮಾನ್‌ಬಹಾದ್ದೂರ್ ಸಿಂಗ್ ಅಂತ ಒಬ್ಬ ಅಧ್ಯಾಪಕರಿದ್ದರು. ಬಿಹಾರಿನ ಸುಲ್ತಾನಪುರದವರು. ಅವರು ಕವಿ ಕೂಡ. ಮೂರ್‍ನಾಲ್ಕು ಕವಿತಾ ಸಂಕಲನಗಳನ್ನು ಪ್ರಕಟಿಸಿದ್ದರು. ಪಿ.ಯು. ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದರು. ಪ್ರಿನ್ಸಿಪಾಲ್ ಕೂಡ ಆಗಿದ್ದರು. ನನಗಿಂತ ಹಿರಿಯರು. ಆವಾಗ ಬಿಹಾರಿನಲ್ಲಿ ಒಂಥರದ ಗೂಂಡಾಗರ್ದಿಯ ಕಾಲ. ಒಬ್ಬ ಗೂಂಡಾ ವಿದ್ಯಾರ್ಥಿ ಯಾವುದೋ ವಿಷಯಕ್ಕೆ ಸಂಬಂಧಿಸಿದಂತೆ ಇವರ